ಪ್ರಾಥಮಿಕ ಉರ್ದುಶಾಲೆಗಳ ಅಭಿವೃದ್ಧಿ ಕುರಿತು

856 - ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1994-95ನೇ ಸಾಲಿನಲ್ಲಿ ಪ್ರಾಥಮಿಕ ಉರ್ದು ಶಾಲೆಗಳ ಅಭಿವೃದ್ಧಿಗಾಗಿ ಎಷ್ಟು ಹಣ ಬಿಡುಗಡೆ ಮಾಡಿದೆ.*

ಆ) *ಸರ್ಕಾರ ಈ ಹಣವನ್ನು ಉರ್ದು ನಿರ್ದೇಶನಾಲಯಕ್ಕೆ ಬಿಡುಗಡೆ ಮಾಡಿದೆಯೇ?*

ಇ) *ಈ ಹಣದಲ್ಲಿ ಪ್ರಾಥಮಿಕ ಉರ್ದು ಶಾಲೆಗಳಿಗೆ ಪೀಠೋಪಕರಣ ಹಾಗೂ ಭೂಪಟಗಳನ್ನು ಖರೀದಿಸುವುದಕ್ಕೆ ಸರ್ಕಾರ ಅನುಮತಿ ನೀಡಿದೆಯೇ?*

ಈ) ಈ ಹಣ ಯಾವ ಯಾವ ಬಾಬ್ತುಗಳಿಗೆ ಖರ್ಚು ಮಾಡಲಾಗಿದೆ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) 1994-95ನೇ ಸಾಲಿಗೆ ರೂ. 28.80 ಲಕ್ಷ ಹಣ ಬಿಡುಗಡೆ ಮಾಡಲಾಗಿದೆ.

ಆ) ಹೌದು

ಇ) ಹೌದು.

ಈ)

1)	ಪೀಠೋಪಕೆರಣಗಳಿಗೆ	ರೂ. 10.00 ಲಕ್ಷ
2)	ಬೋಧನೋಪಕರಣಗಳಿಗೆ	ರೂ. 8.80 ಲಕ್ಷ
3)	ಗ್ರಂಥಾಲಯ ಪುಸ್ತಕಗಳಿಗೆ	ರೂ. 5.00 ಲಕ್ಷ
4)	ತರಬೇತಿ ವಿಚಾರಣೆ ಸಂಕಿರಣ	ರೂ. 5.00 ಲಕ್ಷ

(ಈ ಹಣವನ್ನು ಉಪಯೋಗಿಸಿರುವುದಿಲ್ಲ)

ಕ್ರೀಡಾ ಪಟುಗಳಿಗೆ ಕ್ರೀಡಾಮಾಸಾಶನ ಮಂಜೂರು ಮಾಡುವ ಬಗ್ಗೆ

895 - ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *50 ವರ್ಷ ಮೀರಿದ ಎಷ್ಟು ಜನ ಕ್ರೀಡಾ ಪಟುಗಳಿಗೆ ಕ್ರೀಡಾ ಮಾಸಾಶನ ಮಂಜೂರು ಮಾಡಿದೆ? ಹಾಗಿದ್ದಲ್ಲಿ ಈ ಬಾಬ್ತು ವೆಚ್ಚ ಮಾಡಿದ ಮೊತ್ತವೆಷ್ಟು?*

ಆ) *ಇವರಲ್ಲಿ ಎಷ್ಟು ಜನ ಅಂತರಾಷ್ಟ್ರೀಯ ಮಟ್ಟ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಕ್ರೀಡಾ ಪಟುಗಳು*

ಇ) *ಫಲಾನುಭವಿಗಳನ್ನು ಹೇಗೆ ಆಯ್ಕೆ ಮಾಡಲಾಗುವುದು?*

ಈ) *ಮಾಸಾಶನದ ಧರವನ್ನು ಹೆಚ್ಚಿಸುವ ಉದ್ದೇಶ ಇದೆಯೇ?*

ಶ್ರೀ ಅಜಯಕುಮಾರ್ ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) 325 ಕ್ರೀಡಾ ಪಟುಗಳಿಗೆ ಮಾಸಾಶನ ನೀಡಿದೆ. ವರ್ಷಕ್ಕೆ ರೂ. 6,28,200-00 ಗಳು

ಆ) ಅಂತರ ರಾಷ್ಟ್ರೀಯ 6
ರಾಷ್ಟ್ರೀಯ 54
ರಾಜ್ಯ ಮಟ್ಟ 265